C.C.No.1241/2021
PW-8
CW-3

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಸಿ.ಸಿ. ಸಂಖ್ಯೆ 1241/2021**

**ಪ್ರಾಸಾಃ 08**

**ಚಾಸಾಃ 03**

**ದಿನಾಂಕ 06.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಜಶೇಖರ್ |
| ತಂದೆಯ ಹೆಸರು | - | ಚಿಕ್ಕಣ್ಣ |
| ವಯಸ್ಸು | - | 52 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸ ಸ್ಥಳ | - | ತಿಪ್ಪಗಾನಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

ಚಾಸಾ-1, 2, 18 ಗೊತ್ತು. ದಿ.10.08.2020 ರಂದು ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ವಿಚಾರವಾಗಿ ಪೋಲಿಸ್ ರವರು ಸ್ದಳ ಮಹಜರ್ ಗೆ ಬಂದಾಗ ನಾನು ನಿಪಿ-9 ಕ್ಕೆ ಸಹಿ ಮಾಡಿದ್ದೇನೆ. ಸಾಕ್ಷಿಗೆ ನಿಪಿ-9 ಮಹಜರ್ ನ್ನು ತೋರಿಸಲಾಯಿತು. ಸಾಕ್ಷಿ ಅದನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಾನು ಚಾಸಾ-1 ಮತ್ತು 2 ಇದ್ದೆವು. ಅದನ್ನು ಬರೆದ ಸಮಯ ಈಗ ಮರೆತು ಹೋಗಿದೆ. ಪೋಲಿಸ್ ನವರು ಸ್ದಳದಲ್ಲಿ ಬಾಗಿಲು ಹೊಡೆದ ಬಗ್ಗೆ ಪರಿಶೀಲನೆ ಮಾಡಿದ್ದಾರೆ.

ಮರುದಿನ ಪೋಲಿಸ್ ನವರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿ ನಿಪಿ-10 ನ್ನು ನೋಡಿ ತಮ್ಮ ಸಹಿ ಗುರುತಿಸುತ್ತಾರೆ. ಅದನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

ಆ ಸಮಯದಲ್ಲಿ ಚಾಸಾ-**1** ಮತ್ತು **18** ರವರು ಇದ್ದರು. ನನ್ನ ಸಮಕ್ಷಮ ಚಾಸಾ-**1** ರವರ ಮನೆಯಲ್ಲಿ ಕಳ್ಳತನವಾದ ಲಕ್ಷ್ಮಿ ಮುಖವಾಡ ಸಿಕ್ಕಿದೆ ಎಂದು ಮಹಜರ್ ಬರೆದು ನನ್ನ ಮತ್ತು ಚಾಸಾ-**1**, **4** ರವರ ಸಮಕ್ಷಮ ಬೆಳಗ್ಗೆ **10.00** ರಿಂದ **12.00** ಗಂಟೆ ವರೆಗೂ ಬರೆದಿದ್ದಾರೆ. ಚಾಸಾ-**1** ರವರ ಕಳ್ಳತನವಾದ ಲಕ್ಷ್ಮಿ ಮುಖವಾಡವನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲು ನ್ಯಾಯಾಲಯದ ಮುಂದೆ ಹಾಜರುಪಡಿಸದ ಕಾರಣ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ